ದೇಗುಲ) ೧೦. ಕಾಲಭೈರವ ಮಂದಿರ ೧೧. ಮಂಗಳನಾಥ ಮಂದಿರ್ (ಶಿವಲಿಂಗರೂಪದಲ್ಲಿರುವ ಮಂಗಳಗ್ರಹಕ್ಕೆ ಮುಡಿಪಾದ ಮಂದಿರ) ೧೨. ಸಾಂದೀಪನಿ ಆಶ್ರಮ (ಶ್ರೀ ಕೃಷ್ಣ ಮತ್ತು ಸುದಾಮರು ವಿದ್ಯಾಭ್ಯಾಸ ಮಾಡಿದ ಸ್ಥಳ).

ಇವನ್ನೆಲ್ಲ ನೋಡುವ ಹೊತ್ತಿಗೆ ಸಂಜೆ ೬ ಗಂಟೆಯಾಯಿತು. ನಂತರ, ಉಜ್ಜೈನಿಯ ಪ್ರಸಿದ್ಧ ಮಹಾ ಕಾಲೇಶ್ವರ ಜ್ಯೋತಿರ್ಲಿಂಗದ ದರ್ಶನ ಮಾಡಿದೆವು. ಲಿಂಗಕ್ಕೆ ಗಂಗಾಜಲದಿಂದ ಅಭಿಷೇಕ ಮತ್ತು ಬಿಲ್ವಾರ್ಚನೆ ಮಾಡಿ, ಗರ್ಭಮಂದಿರದ ಹೊರಗಡೆ ಕುಳಿತುಕೊಂಡು, ಸ್ತೋತ್ರಪಠಣ ಮತ್ತು ಜಪ ಮಾಡಿದೆವು. ಸುಮಾರು ೭.೦೦ ಗಂಟೆಯ ಹೊತ್ತಿಗೆ ಮಹಾಕಾಲೇಶ್ವರನಿಗೆ ಸಂಧ್ಯಾರತಿ ನಡೆಯಿತು. ನಂತರ ಅಲ್ಲಿನ ಆವರಣದಲ್ಲಿರುವ ಇತರ ದೇವಸ್ಥಾನಗಳನ್ನು ನೋಡಿಕೊಂಡು, ಆಶ್ರಮಕ್ಕೆ ವಾಪಸ್ಸು ಬಂದೆವು. ಮರುದಿನ ಬೆಳಗ್ಗೆ ಮತ್ತೆ ಜ್ಯೋತಿರ್ಲಿಂಗದ ದರ್ಶನ ಮಾಡಿದೆವು. ದೇವಸ್ಥಾನದಲ್ಲಿಯೇ ಕುಳಿತು, ಸ್ತೋತ್ರಪಾಠ, ಜಪ, ಧ್ಯಾನಗಳನ್ನು ಮಾಡಿಕೊಂಡೆವು.

**ಓಂಕಾರೇಶ್ವರ:** ೫.೧೨.೨೦೧೩ರಂದು ಮಧ್ಯಾಹ್ನ ೨.೦೦ ಗಂಟೆಗೆ ಇಂದೋರ್ ನಗರಕ್ಕೆ ಪ್ರಯಾಣ ಮಾಡಿದೆವು. ಅಲ್ಲಿನ ರಾಮಕೃಷ್ಣ ಆಶ್ರಮದಲ್ಲಿ ಉಳಿದುಕೊಂಡೆವು. ಆಶ್ರಮವು ವಿವೇಕಾನಂದ ವಿದ್ಯಾಪೀಠ ಎನ್ನುವ ಶಾಲೆಯನ್ನು ನಡೆಸುತ್ತಿದೆ. ಹಾಗೆಯೇ ಒಂದು ಫಿಸಿಯೋಥೆರಪಿ ಕೇಂದ್ರವನ್ನೂ ನಡೆಸುತ್ತಿದೆ. ಇಲ್ಲದೆ, ಇಲ್ಲಿ ಶ್ರೀರಾಮಕೃಷ್ಣರ ಒಂದು ಚಿಕ್ಕ ಮಂದಿರವೂ ಇದೆ. ಮರುದಿನ, ಅಂದರೆ ೬.೧೨.೨೦೧೩ರಂದು ಬಸ್ಸಿನಲ್ಲಿ ಓಂಕಾರೇಶ್ವರಕ್ಕೆ ಪಯಣಿಸಿದೆವು. ಓಂಕಾರೇಶ್ವರದಲ್ಲಿ ರಾಮಕೃಷ್ಣ ಮಹಾಸಂಘಕ್ಕೆ ಸೇರಿದ ಒಂದು ಸಾಧುಕುಟೀರವಿದ್ದು, ಅಲ್ಲಿ ಸಾಧುಗಳು ಉಳಿದುಕೊಂಡು ಧ್ಯಾನಜೀವನ ನಡೆಸುವ ಅವಕಾಶ ವಿದೆ. ಓಂಕಾರೇಶ್ವರ ಕ್ಷೇತ್ರದ ಬಗ್ಗೆ ಎರಡು ಮಾತುಗಳು: ಈ ಕ್ಷೇತ್ರವು ನರ್ಮದಾ ನದಿಯ ಮಧ್ಯದಲ್ಲಿರುವ ಒಂದು ದ್ವೀಪ. ಇಲ್ಲಿರುವ ಜ್ಯೋತಿರ್ಲಿಂಗವನ್ನು 'ಓಂಕಾರೇಶ್ವರ' ಎಂದು ಕರೆಯುತ್ತಾರೆ. ಪ್ರಾಚೀನ ಕಾಲದಿಂದಲೂ ಇದೊಂದು ಪ್ರಸಿದ್ಧ ಪುಣ್ಯಕ್ಷೇತ್ರ. ನೂರಾರು ಸಾಧುಗಳು ಇಲ್ಲಿ ತಂಗಿ ತಪಸ್ಸು ಮಾಡಿದ ಕ್ಷೇತ್ರವಿದು. ಕೇರಳದಿಂದ ಬಂದ ಶಂಕರ ಎಂಬ ಬಾಲಕ ಇಲ್ಲಿ ತಂಗಿದ್ದ ಗೋವಿಂದ ಭಗವತ್ಪಾದರೆಂಬ ಮಹಾತ್ಮರನ್ನು ದರ್ಶಿಸಿದನು. ಅವರ ಅನುಗ್ರಹದಿಂದ ಸಂನ್ಯಾಸವನ್ನು ಪಡೆದುಕೊಂಡು, 'ಶಂಕರಾಚಾರ್ಯ'ರೆಂಬ ಹೆಸರಿನಿಂದ ಪ್ರಖ್ಯಾತರಾದರು. ಹೀಗೆ 'ಶಂಕರ' ಶಂಕರಾಚಾರ್ಯರಾದ ಪುಣ್ಯಕ್ಷೇತ್ರ ಈ ಓಂಕಾರೇಶ್ವರ.

ಇಲ್ಲಿಂದ ಪೂರ್ವದಿಕ್ಕಿಗೆ ಮಧ್ಯಪ್ರದೇಶ ಸರ್ಕಾರದವರು ಒಂದು ದೊಡ್ಡ ಅಣೆಕಟ್ಟನ್ನು ಕಟ್ಟಿದ್ದಾರೆ. ಆ ಅಣೆಕಟ್ಟಿನಿಂದ ಬಿಡುವ ನೀರು ಎರಡು ಕವಲಾಗುತ್ತದೆ. ಆ ಎರಡು ಕವಲುಗಳು ದ್ವೀಪವನ್ನು ಬಳಸಿಕೊಂಡು, ಪಶ್ಚಿಮದಿಕ್ಕಿನಲ್ಲಿ ಮತ್ತೆ ಸೇರಿ 'ಸಂಗಮ' ಉಂಟಾಗುತ್ತದೆ (ನಮ್ಮ ಶ್ರೀರಂಗಪಟ್ಟಣದಲ್ಲಿರುವಂತೆ). ಈ ಎರಡು ಕವಲುಗಳಲ್ಲಿ ಒಂದಕ್ಕೆ 'ನರ್ಮದಾ' ಎನ್ನುತ್ತಾರೆ. ಮತ್ತೊಂದಕ್ಕೆ 'ಕಾವೇರಿ' ಎನ್ನುತ್ತಾರೆ. ಓಂಕಾರೇಶ್ವರ ದ್ವೀಪದಲ್ಲಿ ವಿವಿಧ ಸಾಧುಸಂಪ್ರದಾಯಗಳಿಗೆ ಸೇರಿದ ಹಲವಾರು ಮಠಗಳಿವೆ. ನರ್ಮದೆಯ ಇನ್ನೊಂದು ತೀರದಲ್ಲಿ ಅಮಲೇಶ್ವರ ದೇವಸ್ಥಾನವಿದೆ. ಹಿಂದಿನ ಕಾಲದಲ್ಲಿ, ಮಳೆಗಾಲದಲ್ಲಿ ನದಿಯಲ್ಲಿ ಪ್ರವಾಹ ಬಂದಾಗ, ಜನರು ಓಂಕಾರೇಶ್ವರನ ದರ್ಶನಕ್ಕೆ ಬರಲು ಸಾಧ್ಯವಾಗುತ್ತಿರಲಿಲ್ಲ. ಅದಕ್ಕೆಂದೇ ಈ ದೇವಸ್ಥಾನವನ್ನು ನಿರ್ಮಿಸಿ, ಅದನ್ನೇ ಓಂಕಾರೇಶ್ವರವೆಂದು ಕರೆದು ಪೂಜಿಸುತ್ತಿದ್ದರು ಎಂಬ ಐತಿಹ್ಯವಿದೆ. ಹಾಗೆಯೇ ಓಂಕಾರೇಶ್ವರ ದ್ವೀಪದ ಪರಿಕ್ರಮ ಮಾಡುವ ಪದ್ಧತಿಯೂ ಇದೆ. ಸುಮಾರು ೬ ಕಿ.ಮಿ. ದೂರವಿರುವ ಪರಿಕ್ರಮ ಮಾರ್ಗವನ್ನು ಕ್ರಮಿಸಲು ಒಂದೂವರೆ ಗಂಟೆ ಬೇಕಾಗುತ್ತದೆ. ಪರಿಕ್ರಮದ ಮಾರ್ಗದುದ್ದಕ್ಕೂ ಭಗವದ್ಗೀತೆಯ ಶ್ಲೋಕಗಳುಳ್ಳ ಶಿಲಾಫಲಕಗಳನ್ನು ಸ್ಥಾಪಿಸಿದ್ದಾರೆ. ನರ್ಮದಾ ನದಿಯ ವಿಶೇಷ ಇನ್ನೊಂದಿದೆ. ನದಿಯಲ್ಲಿ ಸಿಕ್ಕಿರುವ ಎಲ್ಲ ಗುಂಡಗಿನ ಕಲ್ಲುಗಳೂ ಬಾಣೇಶ್ವರ ಶಿವನೆಂದೇ ಎಂಬ ನಂಬಿಕೆ ಇದೆ. ಇಲ್ಲಿನ ಒಂದು ಪದ್ಧತಿಯೆಂದರೆ, ಒಬ್ಬರು ಇನ್ನೊಬ್ಬರನ್ನು ಸಂಬೋಧಿಸುವಾಗ 'ನರ್ಮದೇ ಹರ' ಎಂದು ಸಂಬೋಧಿಸುತ್ತಾರೆ.



ಓಂಕಾರೇಶ್ವರ ಕ್ಷೇತ್ರವನ್ನು ೬.೧೨..೨೦೧೩ರ ಮಧ್ಯಾಹ್ನ ತಲುಪಿದೆವು. ಸಂಜೆಯ ಹೊತ್ತಿಗೆ ಜ್ಯೋತಿರ್ಲಿಂಗದ ದರ್ಶನ ಮಾಡಿದೆವು. ಸುಮಾರು ೫ ಗಂಟೆಗೆ ಸಂಗಮಕ್ಕೆ ಹೋಗಿ ಸೂರ್ಯಾಸ್ತವನ್ನು ವೀಕ್ಷಿಸಿದೆವು. ದಿನಾಂಕ ೭.೧೨. ೨೦೧೩ರಂದು ಓಂಕಾರೇಶ್ವರ ಪರಿಕ್ರಮ ಮಾಡಿದೆವು. ದಿನಾಂಕ ೮.೧೨.೨೦೧೩ರಂದು ಪುನಃ ನರ್ಮದಾ ಪರಿಕ್ರಮ ಮಾಡಿ, ಇನ್ನೊಂದು ತೀರದಲ್ಲಿರುವ ಅಮಲೇಶ್ವರ ಶಿವನ ದರ್ಶನ ಮಾಡಿದೆವು. ಮರುದಿನ ಶ್ರೀಶಂಕರಾಚಾರ್ಯರಿಗೆ, ಅವರ ಗುರುಗಳಾದ ಗೋವಿಂದ ಭಗವತ್ಪಾದರು ಸಂನ್ಯಾಸ ದೀಕ್ಷೆಯನ್ನು ನೀಡಿದ ಸ್ಥಳವನ್ನು ನೋಡಿದೆವು. ಅಂದು ಸಂಜೆ ಬಸ್ಸಿನಲ್ಲಿ ಪ್ರಯಾಣ ಮಾಡಿ, ಆಶ್ರಮವನ್ನು ತಲುಪಿದೆವು.

೧೦.೧೨.೨೦೧೩ರಂದು ಇಂದೋರ್ ನಗರದಲ್ಲಿ ಕೆಲವು ಪ್ರೇಕ್ಷಣೀಯ ಸ್ಥಳಗಳನ್ನು ನೋಡಿದೆವು. ಅಂದು ಸಂಜೆ ಪ್ರಯಾಣ ಮಾಡಿ, ೧೧.೧೨.೨೦೧೩ ರಂದು ಬೆಳಗ್ಗೆ ಮುಂಬೈ ತಲುಪಿದೆವು. ಮುಂಬೈ ರಾಮಕೃಷ್ಣ ಆಶ್ರಮ ದಲ್ಲಿ ಉಳಿದುಕೊಂಡು, ಎರಡು ದಿನಗಳ ಕಾಲ ಅಲ್ಲಿನ ಪ್ರೇಕ್ಷಣೀಯ ಸ್ಥಾನಗಳನ್ನು ನೋಡಿಕೊಂಡು ಬಂದೆವು. ಕೊನೆಗೆ ೧೪.೧೨.೨೦೧೩ರಂದು ಮೈಸೂರಿಗೆ ವಾಪಸ್ಸು ಬಂದೆವು.

# ಯುಗಾದಿಯ ಮಹತ್ವ

**ಹಿಂದೂ ವರ್ಷವು ಯುಗಾದಿಯಿಂದ ಆರಂಭವಾಗುವುದು. ಜ್ಯೋತಿಶ್ಶಾಸ್ತ್ರ ಮತ್ತು ಪೌರಾಣಿಕ ದೃಷ್ಟಿಗಳಿಂದ ಈ ಹಬ್ಬದ ಆಧ್ಯಾತ್ಮಿಕ ಮಹತ್ವವನ್ನು ವಿದ್ವತ್ಪೂರ್ಣವಾಗಿ ವಿವರಿಸಿರುವ ಲೇಖಕಿ ಸಂಸ್ಕೃತ ವಿದ್ವಾಂಸರು. ನಿವೃತ್ತ ಕಾಲೇಜು ಪ್ರಾಂಶುಪಾಲರಾದ ಇವರು ರಾಮಕೃಷ್ಣ ಆಶ್ರಮದ ಭಕ್ತರು. ಕೆಲವು ಸಂಸ್ಕೃತ ಗ್ರಂಥಗಳನ್ನು ಅನುವಾದ ಮಾಡಿರುವ ಇವರು ವಿವೇಕಪ್ರಭ ಪತ್ರಿಕೆಯಲ್ಲಿ ಹಲವಾರು ಲೇಖನಗಳನ್ನು ಬರೆದಿದ್ದಾರೆ.**

**—————— ಡಾ. ಕೆ.ಎಲ್. ಪ್ರಸನ್ನಾಕ್ಷಿ**



ಯುಗಯುಗಾದಿ ಕಳೆದರೂ
ಯುಗಾದಿ ಮರಳಿ ಬರುತಿದೆ
ಹೊಸವರುಷಕೆ ಹೊಸ ಹರುಷವ
ಹೊಸದು ಹೊಸದು ತರುತಿದೆ
ತನನ್ನಷ್ಟೇ ಮರೆತಿದೆ

**ಯದ್ಯುಜ್ಯತೇಽಸು ಕರ್ಮಮನೋವಚೋಭಿ–**
**ರ್ದೇಹಾತ್ಮಜಾದಿಷು ನೃಭಿಸ್ತದಸತ್ ಪೃಥಕ್ತ್ವಾತ್ ।**
**ತೈರೇವ ಸದ್ಭವತಿ ಯತ್ಕ್ರಿಯತೇಽಪೃಥಕ್ತ್ವಾ–**
**ತ್ಸರ್ವಸ್ಯ ತದ್ಭವತಿ ಮೂಲನಿಷೇಚನಂ ಯತ್ ॥**
**(ಭಾಗವತ : ೮.೧೦.೨೯)**

"ಮನುಷ್ಯರು ತಮ್ಮ ಕರ್ಮ, ಮನಸ್ಸು ಮತ್ತು ಮಾತುಗಳ ಮೂಲಕ ತಮಗೆ ಮತ್ತು ತಮ್ಮವರಿಗೆ ಎಂದು ಏನನ್ನೆಲ್ಲ ಮಾಡುತ್ತಾರೋ ಅದು ವ್ಯರ್ಥವೇ ಸರಿ. ಇದಕ್ಕೆ ಬದಲಾಗಿ, ಈ ಎಲ್ಲವನ್ನೂ ಭಗವಂತನಿಗಾಗಿ, ಭಗವತ್ಪ್ರೀತ್ಯರ್ಥವಾಗಿ ಭಗವದ್ಭಾವದಿಂದ ಮಾಡಿದಾಗ ಅವೆಲ್ಲವೂ ಸಾರ್ಥಕವಾಗುತ್ತದೆ."

ಈ ಆಧ್ಯಾತ್ಮಿಕ ಭಾವನೆಯು ಭಾರತದ ಎಲ್ಲ ಭಾಗದ ಜನಮಾನಸದಲ್ಲಿ ಬೇರೂರಿಹೋಗಿದೆ. ಆದ್ದರಿಂದಲೇ ಅವರು ಪ್ರತಿದಿನ ಬೆಳಗ್ಗೆ ಎದ್ದಾಗಿನಿಂದ ರಾತ್ರಿ ಮಲಗುವವರೆಗೂ, ತಮ್ಮ ಎಲ್ಲ ಚಟುವಟಿಕೆಗಳಲ್ಲಿಯೂ ಭಗವಂತನನ್ನೇ ಕಾಣುತ್ತಾರೆ; ತಮ್ಮ ದೈನಂದಿನ ವ್ಯವಹಾರದ ಕೆಲಸಕಾರ್ಯಗಳೆಲ್ಲವನ್ನೂ ಭಗವಂತನಿಗೇ ಅರ್ಪಿಸುತ್ತಾರೆ. ಅದರಲ್ಲೂ ಭಗವದ್ಭಾವದ ಅಭಿವ್ಯಕ್ತಿಯು ಹೆಚ್ಚು ಪ್ರಕರ್ಷಮಾನವಾಗಿ ಇರುವ ವಿಶಿಷ್ಟ ದಿನಗಳನ್ನು 'ಹಬ್ಬಗಳು' ಎಂದು ನಮ್ಮ ಹಿರಿಯರು ಕರೆದರು. ಆ ದಿನಗಳಲ್ಲಿ ಮನಸ್ಸು ಬುದ್ಧಿ ಇಂದ್ರಿಯ ಮೊದಲಾದವನ್ನು ಭಗವಂತನಿಗೆ ಪೂರ್ಣವಾಗಿ ಸಮರ್ಪಣ ಮಾಡಿಕೊಳ್ಳಬೇಕು. ಹಾಗೆ ಮಾಡಿದರೆ, ಹಬ್ಬ ಅಥವಾ ಉತ್ಸವಗಳ ಆಚರಣೆಯು ಆತ್ಯಂತಿಕ ಶ್ರೇಯಸ್ಸನ್ನು ತಂದುಕೊಡುತ್ತದೆ. ಇತರ ದಿನಗಳಲ್ಲಿ ಉದಾಸೀನ ಮಾಡಬಹುದೇನೋ. ಆದರೆ, ಲೋಕೋದ್ಧಾರಕ್ಕೆ ದ್ವಾರವಾದ ಇಂಥ ವಿಶೇಷ ದಿನಗಳಲ್ಲಿ ಜನರು ಹೆಚ್ಚು ಎಚ್ಚರದಿಂದಿರಬೇಕು. ಪರಮಕರುಣಾಳುವಾದ ಭಗವಂತನು ಇಂಥ ಪಾವನ ದಿನಗಳಲ್ಲಿ ಅಪಾರವಾದ ಅನುಗ್ರಹವನ್ನು ಹರಿಸುತ್ತಾನೆ. ಇದನ್ನು ಪಡೆದುಕೊಂಡು ಧನ್ಯರಾಗಬೇಕು. ಇದೇ ಜ್ಞಾನಿಗಳಾದ ಅನುಭವಿಗಳ ಅಭಿಪ್ರಾಯ. ಇಂಥ ಪರ್ವದಿನಗಳಲ್ಲಿ 'ಯುಗಾದಿ' ಹಬ್ಬ ವರ್ಷದ ಆರಂಭದಲ್ಲಿ ಬರುತ್ತದೆ.

'ಯುಗಾದಿ' ಎಂದರೆ ಯುಗದ ಆದಿ. ಬ್ರಹ್ಮಪುರಾಣ ಹೀಗೆ ಹೇಳುತ್ತದೆ: **ಚೈತ್ರೇ ಮಾಸಿ ಜಗದ್ ಬ್ರಹ್ಮ ಸಸರ್ಜ ಪ್ರಥಮೇಽಹನಿ** ಎಂದರೆ ಚೈತ್ರಮಾಸದ ಮೊದಲನೆಯ ದಿನದಂದು ಬ್ರಹ್ಮನು ಈ ಜಗತ್ತನ್ನು ಸೃಷ್ಟಿಸಿದನು. ಬ್ರಹ್ಮನು ತನ್ನ ಸಂಕಲ್ಪಮಾತ್ರದಿಂದ ಈ ಜಗತ್ತನ್ನು ಸೃಷ್ಟಿಸಿದನು ಎಂದು ಪುರಾಣಗಳು ಹೇಳುತ್ತವೆ. ಇಂಥ ಸಂಕಲ್ಪವೇ ಅವನ ಶಕ್ತಿಯನ್ನು ಬಾಹ್ಯಮುಖವನ್ನಾಗಿ ಮಾಡಿತು. ಇದರಿಂದ ಮೊದಲು ಒಂದೇ ಇದ್ದದ್ದು 'ಎರಡು' ಅಥವಾ 'ಯುಗ' ಆಯಿತು. ಯುಗ ಎಂದರೆ ಎರಡು ಅಥವಾ ಜೋಡಿ ಎಂದರ್ಥ. ಹೀಗೆ ಸೃಷ್ಟಿಯ ಆದಿಯ ದಿನವನ್ನು 'ಯುಗಾದಿ' ಎಂದು ಕರೆಯುತ್ತಾರೆ.

ಮುಂದೆ, ನಾವೀಗ ಕಂಡು ಪರಿಭಾವಿಸುವ, ಇಷ್ಟು ದೊಡ್ಡದಾಗಿ ಬೆಳೆದ ಬ್ರಹ್ಮಾಂಡವು ಕ್ರಮೇಣ ವ್ಯಕ್ತವಾಗುತ್ತ ಹೋಯಿತು. ಜಗತ್ತು ರಚನೆಯಾಯಿತು. ಸಮಾಜದ ಅಭಿವೃದ್ಧಿ ಕಾಣಿಸಿಕೊಂಡಿತು. ಇದರಲ್ಲಿ ಅನೇಕ 'ಯುಗ' (ಜೋಡಿ) ಗಳಿವೆ. ಅವುಗಳಲ್ಲಿ ಕೆಲವು ಹೀಗಿವೆ: ಸುಖ–ದುಃಖ, ಲಾಭ–ನಷ್ಟ,